**ನೂಪುರ ಭ್ರಮರಿ**
2321-2519 Noopura Bhramari
**ಸಂಪುಟ: 12, ಸಂಚಿಕೆ :4,5,6**
**ಸೆಪ್ಟೆಂಬರ್ –ಡಿಸೆಂಬರ್ 2018**
Copyright Protected. Infringement of Copyright is punishable offence. No part of this publication should be copied or reproduced.

# ಸಂಗೀತ ಪ್ರಬಂಧಗಳಲ್ಲೊಂದು ರತ್ನ : ಶುಕಸಾರಿಕಾ

**– ವಿದುಷಿ ಕಾಂಚನಾ ರೋಹಿಣಿ ಸುಬ್ಬುರತ್ನಂ, ಬೆಂಗಳೂರು**

ವೇದಗಳ ಕಾಲದಿಂದಲೂ ಮೈನಾ ಹಕ್ಕಿಯು ಸಾರಿಕಾ ಎಂಬ ಹೆಸರಿನಲ್ಲಿ ಪ್ರಚಲಿತದಲ್ಲಿದ್ದು ಪ್ರಸಿದ್ಧವಾಗಿದೆ. ಸಂಸ್ಕೃತ ಶಬ್ದವಾದ ಶುಕಸಾರಿಕಾವು ಗುಲಾಬಿ ಕೊರಳಿನ ಗಿಳಿಗೂ (ಶುಕ) ಗೊರವಂಕ (common myna–ಸಾರಿಕಾ) ಕ್ಕೂ ಅನ್ವಯಿಸುತ್ತದೆ. ಶುಕಸಾರಿಕಾವು ಭಾರತದಲ್ಲಿ ಸಂಸ್ಕೃತ, ಬೌದ್ಧಪ್ರಾಕೃತಗಳಲ್ಲಿ ಮಾತ್ರವಲ್ಲದೆ ಅನೇಕ ಪ್ರಾಂತೀಯ ಭಾಷೆಗಳ ಸಾಹಿತ್ಯಗಳಲ್ಲಿಯೂ ಉಲ್ಲೇಖಿಸಲ್ಪಟ್ಟಿವೆ. ಮಾತ್ರವಲ್ಲದೆ, ಅನೇಕ ಶಿಲ್ಪಗಳಲ್ಲಿಯೂ ಶುಕ ಸಾರಿಕಾಗಳೊಡನೆ ಸಾಲಭಂಜಿಕೆಯರು ಸಂವಾದಿಸುವ ಶಿಲ್ಪಗಳೂ ದೇಶದ ಖಜುರಾಹೊ, ಬೇಲೂರು ಇತ್ಯಾದಿ ಶಿಲ್ಪಕಲಾಕ್ಷೇತ್ರಗಳಲ್ಲಿ ಇವೆ.

ಗೊರವಂಕವು ಮೂಲತಃ ಏಷ್ಯಾ ಖಂಡದ ಹಕ್ಕಿಯಾದರೂ ಈಗ ಪ್ರಪಂಚದ ಅನೇಕ ಕಡೆ ಕಂಡುಬರುತ್ತದೆ. ಮಾನವ ವಾಸಸ್ಥಾನಕ್ಕೆ ಚೆನ್ನಾಗಿ ಹೊಂದಿಕೊಳ್ಳುವ ಕಾಗೆ, ಪಾರಿವಾಳಗಳಂತೆ ಗೊರವಂಕ, ಗಿಳಿಗಳೂ ಸಹ ಮಾನವ ವಾಸಸ್ಥಳಗಳಿಗೆ ಹೊಂದಿಕೊಳ್ಳುತ್ತವೆ. ಈ ಎರಡು ಹಕ್ಕಿಗಳೂ ವಿವಿಧ ಸ್ವರಗಳನ್ನೂ ಹಾಗೂ ಮಾನವನ ಧ್ವನಿಯನ್ನೂ, ಮಾತುಗಳನ್ನೂ ಅನುಕರಿಸಬಲ್ಲ, ಸಾಮರ್ಥ್ಯವೂ ಹೊಂದಿ ಒಟ್ಟೊಟ್ಟಿಗೇ ಮರಗಳಲ್ಲಿ ವಾಸವನ್ನೂ ಮಾಡುತ್ತವೆ. ಆದ್ದರಿಂದಾಗಿ ಶುಕಸಾರಿಕಾ ಶಬ್ದವು ಇಬ್ಬರು ಜೊತೆಗಾರರ ಸಂಕೇತವೂ ಆಗಿದೆ. ಮಾತುಗಳನ್ನು ಅನುಕರಿಸುವ ಶುಕಸಾರಿಕಾ ಪಕ್ಷಿಗಳ ಈ ಶಕ್ತಿಯಿಂದಾಗಿ ಪ್ರಾಚೀನದಲ್ಲಿ ಇವುಗಳು ಸಂದೇಶವಾಹಕಗಳೂ ಆಗಿದ್ದವು. ಪ್ರಾಚೀನ 64 ವಿದ್ಯೆಗಳಲ್ಲಿ ಶುಕಸಾರಿಕಾಗಳಿಗೆ ಮಾತನ್ನು ಕಲಿಸುವುದೂ ಪ್ರಮುಖ ವಿದ್ಯೆಯೇ ಆಗಿತ್ತು! ಸಂಸ್ಕೃತ ಸಾಹಿತ್ಯದಲ್ಲಿ ಗೊರವಂಕವು ಅನೇಕ ಹೆಸರುಗಳನ್ನು ಹೊಂದಿದೆ. ಅದರಲ್ಲಿ ಹೆಚ್ಚಿನವು ಗೊರವಂಕ ಪಕ್ಷಿಯ ರೂಪ, ಚಲನವಲನ, ಸ್ವಭಾವ ಇತ್ಯಾದಿಗಳನ್ನು ಸೂಚಿಸುತ್ತವೆ. 'ಸಾರಿಕಾ' ಹೆಸರಿನೊಂದಿಗೆ ಗೊರವಂಕಕ್ಕೆ ಚಿತ್ರನೇತ್ರ – ಸುಂದರವಾದ ಕಣ್ಣುಗಳು, ಪೀತನೇತ್ರ – ಹಳದಿಕಣ್ಣುಗಳು, ಪೀತಪಾದ – ಹಳದಿಕಾಲುಗಳು ಇತ್ಯಾದಿ ಹೆಸರುಗಳೊಂದಿಗೆ 'ಕಲಹಪ್ರಿಯ' ಎಂಬ ಹೆಸರೂ ಉಂಟು! ಇದು ಗೊರವಂಕದ ಚರ್ಚಿಸುವ, ಜಗಳಗಂಟತನದ ಸ್ವಭಾವವನ್ನೂ ಹೇಳುತ್ತದೆ. ಹೀಗೆ ಮಾನವರಂತೆ ಮಾತನಾಡಲು ಸಾಧ್ಯವಾಗುವಂತಹ ಗಿಳಿ ಗೊರವಂಕ ಪಕ್ಷಿಗಳ ಬುದ್ಧಿಮತ್ತೆ, ಜಗಳಗಂಟತನದ, ಜೊತೆಗಾರತನ ಇತ್ಯಾದಿ ಲಕ್ಷಣಗಳು ಪ್ರಾಚೀನ ಸಂಗೀತ ಶಾಸ್ತ್ರಜ್ಞರಿಗೆ ಇಂತಹುದೇ ಸಂಭಾಷಣೆಗಳಿರುವ, ಸಂದರ್ಭೋಚಿತ ಪ್ರಯೋಗವಾಗುವ ಪ್ರಬಂಧಗಳಿಗೆ (ಹಾಡು) 'ಶುಕಸಾರಿತ' ಅಥವಾ 'ಶುಕಸಾರಿಕಾ' ಎಂಬ ನಾಮವನ್ನಿಡಲು ಸ್ಫೂರ್ತಿಯಾಯಿತೆಂದು ತೋರುತ್ತದೆ.

ಲಖನೌ ಪ್ರದೇಶದ ವೈದ್ಯ ಹಾಗೂ ಸಾಹಿತಿಗಳಾದ ಡಾ. ಶ್ಯಾಮ ಗುಪ್ತಾರವರು ತಮ್ಮ ಹಿಂದೀ ಭಾಷಾ ಪುಸ್ತಕವಾದ 'ಪ್ರೇಮಕಾವ್ಯ' (ಪ್ರೇಮದ ವಿವಿಧ ಭಾವ ರೂಪಗಳನ್ನು ನಿರೂಪಿಸುವಂತಹ ಗೀತಕಾವ್ಯ) ದಲ್ಲಿ ಪ್ರೇಮದಲ್ಲಿ ವಿಭಿನ್ನ ಭಾವಗಳು ಇವೆ. ಪ್ರೇಮಭಾವವನ್ನು ಯಾವುದೇ ಒಂದು ಮಾನದಲ್ಲಿಟ್ಟು ಅಳೆಯಲು ಸಾಧ್ಯವಿಲ್ಲ. ಪ್ರೇಮಕ್ಕೆ ಯಾವುದೇ ನಿಯಮದ ಕಟ್ಟುಪಾಡುಗಳಿಲ್ಲ, ಅದರಲ್ಲಿ ಒಂದು ವಿಹಂಗಮ ಭಾವವಿದೆ, ಎಂದು ಹೇಳಿ, ಪ್ರೇಮ ಕಾವ್ಯಗಳಲ್ಲಿ ಒಂಭತ್ತು ವಿಧಗಳಿವೆ ಅವು – 1.ಭ್ರಮರಗೀತೆ, 2.ದೀಪಕ ರಾಗ, 3.ಚಂದಾ – ಚಕೋರ್, 4.ಮಯೂರ್ – ನೃತ್ಯ್, 5.ಕುಮುದಿನಿ, 6.ಸರಿತಾ – ಸಂಗೀತ್, 7.ಚಾತಕ್ – ವಿರಹ್, 8.ವೀಣಾ – ಸಾರಂಗ್, 9.ಶುಕಸಾರಿಕಾ ಎಂದು ಹೇಳಿದ್ದಾರೆ. ಇದರಲ್ಲಿ ದಕ್ಷಿಣ ಭಾರತದಲ್ಲಿ ಕರ್ನಾಟಕದ ದಾಸವರೇಣ್ಯರ ಸಾಹಿತ್ಯದಲ್ಲಿ ಮೊಟ್ಟ ಮೊದಲ ಬಾರಿಗೆ 'ಭ್ರಮರಗೀತೆ'ಗಳು ಉದ್ಘಾಟಿಸಲ್ಪಟ್ಟವು, ಹಾಗೂ ದಕ್ಷಿಣ ಭಾರತದಲ್ಲಿ ಮಯೂರ ನೃತ್ಯವೂ ಬಹಳ ಪ್ರಸಿದ್ಧವೆಂಬುದನ್ನೂ ಗಮನಿಸಬಹುದು. ಸಂಗೀತಶಾಸ್ತ್ರಗ್ರಂಥಗಳಲ್ಲಿಯೂ, ಮತಂಗಮುನಿಯ ಕಾಲದಿಂದಲೂ 'ಶುಕಸಾರಿತ'ವೆಂಬ ಸಂಗೀತ ಪ್ರಬಂಧ ಪ್ರಕಾರವು ಉಲ್ಲೇಖಿಸಲ್ಪಟ್ಟಿದೆ.

**ಸಂಗೀತ ಶಾಸ್ತ್ರದಲ್ಲಿ ಶುಕಸಾರಿಕಾ**

'ಶುಕಸಾರಿಕಾ' ಪ್ರಬಂಧವನ್ನು ಉಲ್ಲೇಖಿಸಿರುವ 'ಬೃಹದ್ದೇಶಿ'ಯು ಅತ್ಯಂತ ಪ್ರಭಾವಶಾಲಿಯಾದ ಪ್ರಾಮಾಣಿಕ, ಪ್ರಾಚೀನ ಸಂಗೀತಶಾಸ್ತ್ರಗ್ರಂಥ. ಇದನ್ನು ರಚಿಸಿದ ಮತಂಗಮುನಿಯು ಕನ್ನಡಿಗ, ಕ್ರಿ. ಶ. 5–6 ನೆಯ ಶತಮಾನದಲ್ಲಿ ಬಹುಶಃ ಹಂಪಿಯಲ್ಲಿ ರಚಿಸಿದನು. ಬೃಹದ್ದೇಶೀಯು ಭಾರತೀಯ ಸಂಗೀತಶಾಸ್ತ್ರದಲ್ಲಿ ಉಪಲಬ್ಧವಾಗಿರುವ ಪ್ರಪ್ರಥಮ ಗ್ರಂಥ, ಅತ್ಯಂತ ಸುಲಲಿತವಾದ, ಪಾಂಡಿತ್ಯಪೂರ್ಣವಾದ, ನಮ್ಮ ಸಂಸ್ಕೃತಿ – ಸಂಗೀತಗಳಿಗೆ ಹೊಸ ಆಯಾಮಗಳನ್ನು ನಿರ್ಮಿಸಿದ, ಬಹುಶ್ರುತವಾದ ಗ್ರಂಥವಾಗಿದೆ. ಆದುದರಿಂದ ಅದನ್ನು ನಂತರದ ಎಲ್ಲ ಮುಖ್ಯಸಂಗೀತಲಾಕ್ಷಣಿಕರೂ ಉದ್ಧರಿಸಿಕೊಂಡಿದ್ದಾರೆ.

“ಈಶ್ವರನ ಮುಖಗಳಿಂದ ಹೊರಹೊಮ್ಮಿರುವ, ಸಂಗೀತದಲ್ಲಿ ದೇಶೀತ್ವವನ್ನು ಉಂಟುಮಾಡುವ ಪ್ರಬಂಧಗಳು ಎಣಿಸಲಾರದಷ್ಟು ವರ್ಣಿಸಲ್ಪಟ್ಟಿವೆ. ಬುದ್ಧಿಯು ಕಡಿಮೆ ಇರುವ ದಡ್ಡರಿಗೆ ಅವು ತಿಳಿಯುವುದಿಲ್ಲ”,ಎಂದು ಹೇಳಿ, ಅವುಗಳ ನಡುವೆ ಸರಿಯಾದ ಲಕ್ಷಣಗಳಿಂದ ವರ್ಣಿಸಲಾಗಿರುವ ಪ್ರಬಂಧಗಳನ್ನು ಮಾತ್ರ ಎತ್ತಿಕೊಂಡು ಮತಂಗಮುನಿಯು ಇತರ ಮುನಿಗಳಿಗೆ ತನ್ನ ಬೃಹದ್ದೇಶೀಯಲ್ಲಿ ಬೋಧಿಸಿದನು. (ಶ್ಲೋ. 1053 – 4). ಜನಪದೀಯವಾದ, ಅಶಿಷ್ಟವಾದ ಚತುಃಸ್ವರ ಮಾತ್ರದ ಸ್ವರಾಂತರ ರಾಗಗಳ ಬಳಕೆಗಳು ಆಂಧ್ರ, ಕಿರಾತ, ದ್ರಾವಿಡ, ಬಂಗ, ಬಾಹ್ಲೀಕ, ಶಬರರಲ್ಲಿವೆ ಎಂದು ಮಾತ್ರ ಹೇಳುತ್ತಾನೆಯೇ ಹೊರತು ಕರ್ನಾಟಕವನ್ನು ಹೇಳುವುದಿಲ್ಲವೆಂಬುದನ್ನು ಗಮನಿಸಿದರೆ ಆ ಕಾಲದಲ್ಲಿಯೇ ಕರ್ಣಾಟಕದಲ್ಲಿ ಶಿಷ್ಟ ಸಂಸ್ಕೃತಿ, ಸಾಹಿತ್ಯ ಹಾಗೂ ಸಂಗೀತಗಳು ಅತ್ಯಂತ ಉನ್ನತಿಯಲ್ಲಿತ್ತು ಎಂದು ಊಹಿಸಬಹುದು . ಗೇಯ ಪ್ರಬಂಧಗಳನ್ನು ನಿರೂಪಿಸುವಲ್ಲಿ ಒಟ್ಟು 48 ಪ್ರಬಂಧಗಳ ಪೈಕಿ ಕನ್ನಡ ಭಾಷೆಯ ಹತ್ತಕ್ಕೂ ಹೆಚ್ಚಿನವುಗಳನ್ನು ವರ್ಣಿಸಿ ಉಳಿದ ದ್ರಾವಿಡ ಭಾಷೆಯವುಗಳಾದ ತೆಲುಗು ತಮಿಳುಗಳನ್ನು ಹಾಗೆಯೇ ಲಾಟ, ಗೌಡ ಭಾಷೆಯವುಗಳನ್ನು ಅಲ್ಪವಾಗಿ ಹೇಳುತ್ತಾನೆ. ಮತಂಗಮುನಿಯು ಹೇಳುವ ಮೊಟ್ಟಮೊದಲನೆಯ ಗೇಯ ಪ್ರಬಂಧವು ಕಂದವೆಂಬ ಛಂದೋಬಂಧ. ಇದು ಅವನ ಕನ್ನಡ ಪ್ರೀತಿಯನ್ನು ಸಿದ್ಧಪಡಿಸುತ್ತದೆ. ಕನ್ನಡ ಭಾಷೆಯಲ್ಲಿನ ಹಾಡುಗಳು ಕ್ರಿ.ಶ.ದ ಪೂರ್ವದಿಂದಲೇ ರೂಢಿಸಿದ್ದಿರಬೇಕು. ಆದರೆ ಇದರ ಪ್ರಥಮೋಲಬ್ಧ ಉಲ್ಲೇಖ, ವರ್ಣನೆಗಳು ದೊರೆಯುವುದು ಮತಂಗಮುನಿಯು ರಚಿಸಿದ ಬೃಹದ್ದೇಶೀಯಲ್ಲಿಯೆ. ಮತಂಗನು ತನ್ನ ಪ್ರಬಂಧಾಧ್ಯಾಯದಲ್ಲಿ ಕಂದ, ವರ್ಣ, ದ್ವಿಪದಿ. ಶುಕಸಾರಿತ, ಏಲಾ, ಕೈವಾಡಗಳು ಕನ್ನಡದಲ್ಲಿ ರಚಿತಗಳೆಂದು ಸ್ಪಷ್ಟವಾಗಿ ಹೇಳುತ್ತಾನೆ. ಕನ್ನಡದ್ದೇ ಎಂದು ಹೇಳದಿದ್ದರೂ ಕನ್ನಡದಲ್ಲಿ ಚೆನ್ನಾಗಿ ರೂಢಿಸಿದ್ದ ತ್ರಿಪದಿ, ಚತುಷ್ಪದಿ, ಷಟ್ಪದಿ, ದಂಡಕ, ಗದ್ಯ ಮುಂತಾದುವುಗಳನ್ನೂ ಅವನು ವರ್ಣಿಸುತ್ತಾನೆ. ಮತಂಗನು ಕೊಡುವ ಲಕ್ಷಣಗಳನ್ನೇ ಉಪಬೃಂಹಿಸಿ ಮುಂದಿನ ಸಂಗೀತಶಾಸ್ತ್ರಕಾರರಾದ ನಾನ್ಯದೇವ, ಸರ್ವಜ್ಞಸೋಮೇಶ್ವರ, ಜಗದೇಕಮಲ್ಲ, ಪಾರ್ಶ್ವದೇವ, ಶಾರ್ಙ್ಗದೇವ, ಕಲ್ಲಿನಾಥ, ಪಂಡರೀಕವಿಠಲ, ಗೋವಿಂದದೀಕ್ಷಿತ, ವೆಂಕಟಮಖಿ ಮೊದಲಾದ ಇತರ ಕನ್ನಡಿಗರು ಕನ್ನಡ ಗೇಯ ಪ್ರಬಂಧಗಳನ್ನು ಅವುಗಳ ಸಂಗೀತಶಾಸ್ತ್ರೀಯ ಹಿನ್ನೆಲೆಯಲ್ಲಿ ಉಳಿಸಿ ಬೆಳೆಸಿದ್ದಾರೆ.

ಮತಂಗನು ಕನ್ನಡದೊಡಗೂಡಿ ಮಿಶ್ರ ಭಾಷೆಯಲ್ಲಿ ರಚಿತವಾಗುತ್ತಿತ್ತೆಂದು ಹೇಳುವ ಪ್ರಬಂಧಗಳಲ್ಲಿ ಶುಕಸಾರಿಕವೂ ಒಂದು. ‘ಯಾವುದು ತಾಲ ಮತ್ತು ಪದಗಳೊಡಗೂಡಿ ಪದ ಮತ್ತು ಪಾಟಗಳಿಂದ ಶೋಭಿಸುತ್ತದೋ, ಪ್ರಶ್ನೆ ಮತ್ತು ಉತ್ತರಗಳನ್ನು ಒಳಗೊಂಡಿರುತ್ತದೋ ಅದನ್ನು ಶುಕಸಾರಿಕವೆಂದು ಬೃಹದ್ದೇಶೀಯಲ್ಲಿ ಹೇಳಿದೆ. ಕನ್ನಡ ಅಥವಾ ಲಾಟ (=ದಕ್ಷಿಣ ಗುಜರಾತ್, ಕೆಲವು ವಿದ್ವಾಂಸರು ಪಾಂಡವರ ಕಾಲದಿಂದ ಶಾತವಾನನ ಶಕದ ಆರಂಭದವರೆಗೆ ಈ ಅವಧಿಯಲ್ಲಿ ಕರ್ಣಾಟಕಕ್ಕೆ ಕುಂತಳ, ನಾಟ, ಲಾಟ ಮುಂತಾದ ಹೆಸರುಗಳು ಪ್ರಾಪ್ತವಾಗಿದ್ದವು ಎಂದು ಅಭಿಪ್ರಾಯ ಪಡುತ್ತಾರೆ. ಆದ್ದರಿಂದ ಲಾಟವೆಂದರೆ ಕನ್ನಡದ್ದೇ ಇನ್ನೊಂದು ಮಿಶ್ರವೇ ಅಥವಾ ಲಾಟವೆಂದರೆ ಈಗಿನ ದಕ್ಷಿಣ ಗುಜರಾತಿನ ಭಾಷೆಯೇ ಎಂದು ಚಿಂತಿಸಬೇಕಾಗಿದೆ.) ಭಾಷೆಯ ಮಾತುಗಳಲ್ಲಿ ಅಥವಾ ಬೇರೆ ಬೇರೆ ಭಾಷೆಗಳ ಮಾತುಗಳ ಬೆರಕೆಯಲ್ಲಿ ಸಂವಾದವು ಪ್ರಶ್ನೋತ್ತರಗಳ ಮಾತುಗಳಿಂದ ಕೂಡಿದ್ದರೆ ಹಾಗೂ ಎರಡು ತಾಳಗಳಿಂದ ರಚಿಸಲ್ಪಟ್ಟಿದ್ದರೆ ಅದು ಶುಕಸಾರಿಕವಾಗುತ್ತದೆ’ (ಶ್ಲೋ. 1090 – 91) ಎಂದು ಹೇಳಿದ್ದಾನೆ. (ಪದವೆಂದರೆ ಸಾರ್ಥಕ ಅಥವಾ ನಿರರ್ಥಕವಾದ ಅಕ್ಷರ ಸಮುಚ್ಚಯ. ಪಾಟ ಅಥವಾ ಪಾಟಾಕ್ಷರಗಳೆಂದರೆ ‘ಸೊಲ್ಲುಕಟ್ಟು’ – ತ ರಿ ಕಿ ಟ ಧೀ ತೊಂ ನಂ ಇತ್ಯಾದಿ ಲಯವಾದ್ಯಗಳಲ್ಲಿ ನುಡಿಸಬೇಕಾಗಿರುವ ಮುಖ್ಯಅಕ್ಷರಗಳು).

ಶುಕಸಾರಿಕೆ, ವರ್ಣ, ವರ್ಣಸರ, ಶುಕಚಂಚು ಇತ್ಯಾದಿ ಪ್ರಬಂಧಗಳನ್ನು 10 – 11ನೆಯ ಶತಮಾನಗಳಲ್ಲಿ ಸೋಮೇಶ್ವರ, ಜಗದೇಕಮಲ್ಲ, ಹರಿಪಾಲದೇವರುಗಳೂ, ಹದಿಮೂರನೆಯ ಶತಮಾನದಲ್ಲಿ ಶಾರ್ಙ್ಗದೇವನೂ ಹಾಗೂ ಅವನನ್ನು ಅನುಸರಿಸುವ ಅರ್ವಾಚೀನ ಲಾಕ್ಷಣಿಕರೂ ಉಲ್ಲೇಖಿಸಿದ್ದಾರೆ. ನಾನ್ಯದೇವನು ತನ್ನ ಸರಸ್ವತೀಹೃದಯಾಲಂಕಾರದಲ್ಲಿ ಮತಂಗನು ಹೇಳಿದ ಲಕ್ಷಣಗಳನ್ನು ಹೇಳಿ ಶುಕಸಾರಿಕಾ ಪ್ರಬಂಧವು ಅನೇಕ ಛಂದೋಬದ್ಧ ಪಾದಗಳನ್ನು ಹೊಂದಿವೆ ಎನ್ನುತ್ತಾನೆ. ಈ ಮೂರನೆಯ ಸೋಮೇಶ್ವರನು(ಸರ್ವಜ್ಞ) ಈ ಲಕ್ಷಣಗಳೊಂದಿಗೆ ಶುಕಸಾರಿಕಾದ ಸಂಭಾಷಣೆಯು ಗದ್ಯರೂಪದಲ್ಲಿಯೂ ಪದ್ಯರೂಪದಲ್ಲಿಯೂ ಇರಬಹುದೆಂದು ಹೇಳಿ ತನ್ನ ರಚನೆಯದೇ ಒಂದು ಉದಾಹರಣೆಯನ್ನು ನೀಡುತ್ತಾನೆ. ಸೋಮರಾಜದೇವನು ತನ್ನ ವಿವರಣೆಯನ್ನು ಶುಕಸಾರಿಕೆಯು ಕನ್ನಡ ಅಥವಾ ಲಾಟ ಭಾಷೆಯಲ್ಲಿ ಸಂಭಾಷಣಾ ರೂಪದಲ್ಲಿದೆ, ಎಂಬುದಕ್ಕಷ್ಟಕ್ಕೇ ಸೀಮಿತಗೊಳಿಸಿಕೊಳ್ಳುತ್ತಾನೆ. ಪಾರ್ಶ್ವದೇವನು ತನ್ನ ಸಂಗೀತಸಮಯಸಾರದಲ್ಲಿ, ಶುಕಸಾರಿಕಾದ ಸೂತ್ರಾನ್ವಯದಲ್ಲಿ, ಇದರಲ್ಲಿ ಪದ, ಪಾಟ, ತಾಲಗಳಿವೆಯೆನ್ನುತ್ತಾನೆ. ಹರಿಪಾಲದೇವನು ಮತಂಗ ಹಾಗೂ ಸರ್ವಜ್ಞ ಸೋಮೇಶ್ವರನು ಹೇಳಿದ್ದನ್ನು ಒಪ್ಪಿಕೊಳ್ಳುವುದರೊಂದಿಗೆ ಶುಕಸಾರಿಕಾ ಪ್ರಬಂಧವನ್ನು ಯಾವುದೇ ಹೊಂದುವ ರಾಗಗಳೊಂದಿಗೆ ಹಾಡಬೇಕು, ಹಾಗೂ ಮುಕ್ತಾಯ ಭಾಗವನ್ನು ಎರಡು ತಾಲಾವರ್ತಗಳಷ್ಟು ಅವಧಿಯಲ್ಲಿ ಹಾಡಬೇಕು ಎನ್ನುತ್ತಾನೆ. ಜಗದೇಕಮಲ್ಲನೂ ಹರಿಪಾಲದೇವನು ಹೇಳಿದ್ದನ್ನೇ ಹೇಳುತ್ತಾನೆ, ಹಾಗೂ ಇದನ್ನು ಮುಂದುವರೆಸಿ, ಪ್ರತಿ ಚರಣಾಂತ್ಯದಲ್ಲಿ ಪಾಟಾಕ್ಷರಗಳನ್ನು ರಚಿಸಿ ಹಾಡಬೇಕೆನ್ನುತ್ತಾನೆ. ರಾಮಕೃಷ್ಣ ಕವಿಯ ಭರತಕೋಶದಲ್ಲಿರುವ ‘ಶುಕಸಾರಿಕಾ’ ದ ಉದ್ಧೃತಿಯ ಗೂಗಲ್ ಲಿಂಕ್ ನ್ನು ಆಕರಋಣದೊಂದಿಗೆ ಕೆಳಗೆ ನೀಡಿದೆ.

**ವಿಜಯನಗರ ಕಾಲದ ಸಂಗೀತ ವಿದ್ವನ್ಮಣಿಗಳ ಸಾಧನೆ**

ವಿಜಯನಗರ ಸಾಮ್ರಾಜ್ಯದ ಸಮಯವು ಭಾರತದ ಇತಿಹಾಸದಲ್ಲಿ ಸುವರ್ಣಯುಗವಾದಂತೆಯೇ, ಸಂಗೀತದ ಇತಿಹಾಸದಲ್ಲಿಯೂ ಸುವರ್ಣಯುಗವೇ. ಕರ್ಣಾಟಕ ಸಾಮ್ರಾಜ್ಯ ನಿರ್ಮಾತೃಗಳಾಗಿದ್ದ ವಿದ್ಯಾರಣ್ಯರು ಕರ್ಣಾಟಕಸಂಗೀತ ಸಾಮ್ರಾಜ್ಯದ ನಿರ್ಮಾತೃವೂ ಹೌದು. ಇದೇ ವಿಜಯನಗರ ಸಾಮ್ರಾಜ್ಯಯುಗದಲ್ಲಿ ಸಂಗೀತಶಾಸ್ತ್ರಜ್ಞರೂ ಭರತಶಾಸ್ತ್ರಕೋವಿದರೂ, ಕವಿಗಳೂ, ಬಯಕಾರರೂ, (ವಾಗ್ಗೇಯಕಾರರು), ಮಹಾವಿದ್ವಾಂಸರೂ ಆಗಿದ್ದ ಕಲ್ಲಿನಾಥ, ರಾಮಾಮಾತ್ಯ (ಈತ ಕಲ್ಲಿನಾಥನ ಮಗಳ ಮಗ), ಪೋಲೂರಿ ಗೋವಿಂದಕವಿ, ಭಂಡಾರು ಲಕ್ಷ್ಮೀನಾರಾಯಣ, ನಿಜಗುಣ ಶಿವಯೋಗಿ, ಪಾಲ್ಕುರಿಕೆ ಸೋಮನಾಥ, ಚಂದ್ರಶೇಖರ ಕವಿ ಮುಂತಾದವರಿಂದ ಶಾಸ್ತ್ರಭಾಗವು ವಿಸ್ತರಿಸಿ, ಸ್ವರಸಪ್ತಕಗಳಿಗೆ ಆಧಾರವಾಗಿ ಗ್ರಹಾಂಶನ್ಯಾಸಗಳಾಗಿ ಷಡ್ಜವೇ ನೆಲೆಗೊಂಡು ಆರೋಹಕ್ರಮದಲ್ಲಿ ಸ್ಥಾಯಿಯಾಗಿ, ಸ್ವರವಿಕೃತಿಗಳು ಶ್ರುತಿಯಾಧಾರಗಳನ್ನು ಸ್ಥಿರಪಡಿಸಿಕೊಂಡು, ವೀಣಾಮೇಳಗಳೂ, ರಾಗಮೇಳಗಳೂ ಸ್ಥಾಯಿಯಾದಂತೆ ಅನೇಕಾನೇಕ ಲಕ್ಷ್ಯ–ಲಕ್ಷಣಗಳು ಸಮನ್ವಯಗೊಂಡು ಸ್ಥಿರವಾದವು. ಪಂಡರೀಕ ವಿಠ್ಠಲನೂ, ಗೋವಿಂದ ದೀಕ್ಷಿತನೂ, ವಲಸೆ ಹೋಗಲೇ ಬೇಕಾದ ಪ್ರಮೇಯದಿಂದ ಹೋದರೂ ಅವರಿಬ್ಬರೂ ಕನ್ನಡಿಗರೇ. ಸಂಗೀತಶಾಸ್ತ್ರಕ್ಕೆ ಅವರ ಕೊಡುಗೆಯೂ ಅತಿಮಹತ್ತರವಾದುದು.

ಇದೇ ಕಾಲದಲ್ಲಿ, ದ್ವೈತಪಂಥಾನುಯಾಯಿಗಳಾಗಿದ್ದ, ವೈಷ್ಣವ ಯತಿಗಳೂ, ಹರಿದಾಸರೂ 15 ರಿಂದ 17ನೆಯ ಶತಮಾನದವರೆಗೂ – ರಾಜಾಶ್ರಯದಿಂದಲೂ, ಜನಪ್ರೀತಿಯಿಂದಲೂ ತಮ್ಮ ಸಂಗೀತಸಾಮ್ರಾಜ್ಯ ವೈಭವವನ್ನು ಮೆರೆದರು. ಕರ್ಣಾಟಕದಲ್ಲಿ ದ್ವೈತಪಂಥಾನುಯಾಯಿ ವೈಷ್ಣವಯತಿಗಳನ್ನು ಎರಡು ವಿಧಗಳಲ್ಲಿ ಹೇಳಲಾಗುತ್ತದೆ. ಅವು – ವ್ಯಾಸಕೂಟ ಹಾಗೂ ದಾಸಕೂಟ. ವ್ಯಾಸಕೂಟದಲ್ಲಿ ಅನೇಕ ಯತಿವರೇಣ್ಯರು ಮಾಧ್ವಮಠಗಳ ಪೀಠಾಧಿಪತಿಗಳಾಗಿದ್ದು ಸಂಸ್ಕೃತ, ವೇದವಿದ್ಯೆಗಳು, ದ್ವೈತಮತಾನುಷ್ಠಾನ ಇತ್ಯಾದಿಗಳಿಂದ ತಮ್ಮ ತಮ್ಮ ಮಠಗಳ, ಪೀಠಗಳ ಸಂಪ್ರದಾಯಗಳನ್ನು ಅನುಸರಿಸಿಕೊಂಡುಬಂದರು. ಇದರಲ್ಲಿ ಶ್ರೀಪಾದರಾಜರು, ವ್ಯಾಸರಾಯರು, ವಾದಿರಾಜರು, ವಿಜಯೀಂದ್ರ ತೀರ್ಥರು, ರಾಘವೇಂದ್ರ ತೀರ್ಥರು ಸೇರಿದ್ದಾರೆ. ದಾಸಕೂಟದಲ್ಲಿ ವ್ಯಾಸಕೂಟದ ಯತಿಪರಂಪರೆಯ ಶಿಷ್ಯರಿದ್ದು ಅವರಲ್ಲನೇಕರು ಗೃಹಸ್ಥರೇ. ಇಂತಹವರಲ್ಲಿ 63 ಜನರು ಪ್ರಮುಖರು. ಇವರಲ್ಲಿ ಪುರಂದರದಾಸರು, ಕನಕದಾಸರು, ಪ್ರಸನ್ನ ವೆಂಕಟದಾಸರು, ವಿಜಯದಾಸರು, ಗೋಪಾಲದಾಸರು, ಮಹೀಪತಿದಾಸರು, ಜಗನ್ನಾಥದಾಸರು ಮುಂತಾದವರು ಇದ್ದರು. ಇವರೆಲ್ಲರೂ 15 – 17ನೆಯ ಶತಮಾನಗಳಲ್ಲಿ ರಾಜಕೀಯ ಆಕ್ರಮಣಗಳು ಹಾಗೂ ವಿಪ್ಲವಗಳಿಂದ ಕರ್ಣಾಟಕದಲ್ಲಿ ಸಂಭವಿಸಿದ್ದ ಮತೀಯ, ಜನಾಂಗೀಯ, ಆರ್ಥಿಕ, ಆಧ್ಯಾತ್ಮ, ರಾಜ್ಯಪರಿಸ್ಥಿತಿ ಇತ್ಯಾದಿಗಳಿಂದ ಆಧಾರವೇ ಇಲ್ಲದೆ ಕಂಗೆಟ್ಟಿದ್ದ ಕರ್ಣಾಟಕದ ಮೂಲೆ ಮೂಲೆಗಳಲ್ಲಿಯೂ ಸಂಚರಿಸಿ ಜನರಿಗೆ ಆಧ್ಯಾತ್ಮ, ಸನ್ನಡತೆ, ಭಕ್ತಿ, ಮಾನೋನ್ನತಿ, ಜೀವನೋನ್ನತಿಗಳನ್ನು ಬೋಧಿಸುತ್ತ ಉದ್ಧಾರಕಾರ್ಯವನ್ನು ಮಾಡಿದರು. ಇದನ್ನು ಅವರು ಜನರ ಆಡುಭಾಷೆಯಾದ ಕನ್ನಡದಲ್ಲಿಯೂ, ಸುಲಭವಾದ ರಾಗ ತಾಳಗಳನ್ನು ಉಪಯೋಗಿಸಿ ಸಂಗೀತದ ಮೂಲಕವಾಗಿಯೂ ಮಾಡಿದರು. ಫಂಡರಾಪುರದ ವಿಠ್ಠಲನ ಭಕ್ತರಾದ ಇವರು ತಮ್ಮ ರಚನೆಗಳಿಗೆ ಅಂಕಿತವಾಗಿಯೂ ಹಾಗೂ ದೀಕ್ಷಾನಾಮಗಳಾಗಿಯೂ 'ವಿಠ್ಠಲ'ನ ಹೆಸರನ್ನು ತಮ್ಮ ಹೆಸರುಗಳೊಂದಿಗೆ ಸೇರಿಸಿಕೊಂಡರು, ತಮ್ಮನ್ನು ಹರಿದಾಸರೆಂದು ಕರೆದುಕೊಂಡರು. ಹರಿದಾಸರ ಕಾಲದಲ್ಲಿ ಸ್ತ್ರೀಯರಾದಿಯಾಗಿ ಜನಸಾಮಾನ್ಯರೂ ಸಹ ಇವರಿಂದ ಪ್ರೇರಿತರಾಗಿ ತಾವೂ ಕವಿಗಳಾಗಿ, ದಾರ್ಶನಿಕರಾಗಿ, ಮುಕ್ತಿಯನ್ನು ಬಯಸುವ ಅನುಭಾವಿಗಳಾಗಿ ಆಧ್ಯಾತ್ಮವನ್ನು ಸುಲಭವಾಗಿ ಅನುಸಂಧಾನ ಮಾಡಿದರು!

ವ್ಯಾಸಕೂಟ ಹಾಗೂ ದಾಸಕೂಟಗಳಿಂದಾಗಿ ಪ್ರಾಚೀನ ಪ್ರಬಂಧಗಳನೇಕವು ಜನಾನುಕೂಲ ಹಾಗೂ ಅಭಿರುಚಿಗಳಿಗಾಗಿ ಮೂಲದಿಂದ ಪರಿವರ್ತಿತವಾದ ರೂಪದಲ್ಲಿ ರಚಿತವಾಗಿ ಕೃತಿ, ಜಾವಳಿ, ದೇವರನಾಮ, ಪದ ಇತ್ಯಾದಿಗಳಿಗೆ ಮಾತೃಕೆಗಳಾಗಿ ಪರಿಣಮಿಸಿದವು. ಹರಿದಾಸರಿಂದ ಪ್ರಾಚೀನ ಸಾಲಗಸೂಡ ಪ್ರಬಂಧಗಳು ಪುನರ್ನಿರ್ಮಾಣಗೊಂಡು ಸುಳಾದಿ, ಉಗಾಭೋಗಗಳಾದವು. ಜನಸಾಮಾನ್ಯರಿಗೆ ಸುಲಭವಾಗಿ ಹಾಡಿಕೊಳ್ಳಲು ಸಾಧ್ಯವಾಗುವಂತಹ ಇಂತಹ ರಚನೆಗಳಿಗಾಗಿ ಪ್ರಾಚೀನ ತಾಲಗಳೂ ಮಾರ್ಪಾಟುಗಳನ್ನು ಹೊಂದಿ ಅವರಿಂದ ಪುನರ್ನಿರ್ಮಾಣಗೊಂಡವು. ಇದರೊಂದಿಗೆ ಉದಯರಾಗ, ಸುವ್ವಾಲಿ, ಸೋಬಾನೆ, ಕೋಲುಹಾಡು, ಜೋಗುಳ ಪದ, ಗುಂಡಕ್ರಿಯಾಗಳು, ಹಾಗೂ ದಶಾವತಾರಗಳು ರಚಿತವಾದವು. ಇವುಗಳೊಂದಿಗೇ ಪ್ರಾಚೀನ ಪ್ರಬಂಧಗಳಾದ ಗದ್ಯ, ಚೂರ್ಣಿಕೆ (ಇದು ಮೈಸೂರು ನೃತ್ಯ ಶೈಲಿಯಲ್ಲಿ ಮಾತ್ರ ಇರುವಂತಹದು), ದಂಡಕ, ಶುಕಸಾರಿತ, ಉಮಾತಿಲಕ, ಸುದರ್ಶನಗಳನ್ನು ಪುನರುಜ್ಜೀವಗೊಳಿಸಿದರು. ವೃತ್ತನಾಮಗಳನ್ನು ಸೃಷ್ಟಿಸಿದರು. ದಕ್ಷಿಣ ಭಾರತೀಯ ಭಾಷೆಯಲ್ಲಿ ಮೊಟ್ಟ ಮೊದಲ ಬಾರಿಗೆ ಭ್ರಮರಗೀತೆ ಹಾಗೂ ಕೊರವಂಜಿ ನೃತ್ಯ–ನಾಟಕಗಳನ್ನು ರಚಿಸಿದರು. ಶ್ರೀಪಾದರಾಯರಿಂದ ತಾಲಗಳನೇಕವು ಬದಲಾಗಿ, ತಾಳದಶಪ್ರಾಣಕ್ಕನುಗುಣವಾಗಿ ನಿರ್ಮಾಣಗೊಂಡರೆ, ಪುರಂದರದಾಸರಿಂದ ಮಾಳವಗೌಳವು ರಾಗಾರೋಹ–ಅವರೋಹಗಳಲ್ಲಿ ಸ್ವರಸಂಪೂರ್ಣತೆಯನ್ನು ಪಡೆದು ಅಭ್ಯಾಸಗಾನಕ್ಕಾಗಿ ಸರಲವರಸೆ, ಯಥಾಕ್ಷರ ಪ್ರಬಂಧಗಳಾಗಿ ಗೀತೆಗಳು, ಮುಂತಾದವು ರಚಿತವಾದವು. ಹರಿದಾಸರು ಉತ್ತಮ ಗಾಯಕರೂ, ವಾಗ್ಗೇಯಕಾರರೂ, ಸಂಗೀತ ಸಂಯೋಜಕರೂ ಆಗಿದ್ದರು ಹಾಗೂ ಸಂಗೀತಕಲೆಯು ಯಶಸ್ವಿಯಾಗಿ, ಸಮರ್ಪಕವಾಗಿ, ಪರಂಪರಾಗತವಾಗಿ ಬೆಳೆಯಲು ಕಾರಣರಾದರು. ವಿದ್ಯಾರಣ್ಯರು ಕರ್ಣಾಟಕಸಂಗೀತದ ಮೇಳದ ಕಲ್ಪನೆಯನ್ನು ಹೇಳಿ ರಾಗ ಪ್ರಪಂಚಕ್ಕೆ ಭದ್ರಬುನಾದಿಯನ್ನು ಹಾಕಿದರೆ ಶ್ರೀಪಾದರಾಯರು ಸಂಗೀತ ಹರಿದಾಸಪಂಥದ ಉದ್ಘಾಟಕರಾಗಿ ಇಂದಿನ ಕರ್ಣಾಟಕಸಂಗೀತದ ತಾಲಪದ್ಧತಿಗೆ ಭದ್ರ ಬುನಾದಿಯನ್ನು ಹಾಕಿದರು. ವ್ಯಾಸರಾಯರೋ 'ಅಭಿನವ ಭರತಾಚಾರ್ಯ', 'ಸಂಗೀತಸಂಪ್ರದಾಯಪ್ರವರ್ತಕ' ಎಂಬ ಬಿರುದಾಂಕಿತರೇ ಆಗಿದ್ದರಲ್ಲದೆ ಅನೇಕ ಸಂಗೀತ ವಿದ್ವಾಂಸ

ಹರಿದಾಸರನ್ನೇ ತಯಾರು ಮಾಡಿದರು. ಇದರಲ್ಲಿ ಪ್ರಮುಖರಾದವರು ಪುರಂದರದಾಸರು, ವಾದಿರಾಜರು ಹಾಗೂ ಕನಕದಾಸರು. ಇವರಲ್ಲಿ ಪುರಂದರದಾಸರು ಅವರ ಕೊಡುಗೆಗಳಿಂದಾಗಿ 'ಕರ್ನಾಟಕಸಂಗೀತ ಪಿತಾಮಹ' ಎಂದೇ ಪ್ರಖ್ಯಾತರಾದರು. ಈ ಎಲ್ಲ ಹರಿದಾಸರ ಸಂಗೀತ ಸಾಹಿತ್ಯಗಳಿಂದಾಗಿ, ಸಂಗೀತ ತ್ರಿಮೂರ್ತಿಗಳೂ ಸೇರಿದಂತೆ ಅನೇಕ ದಕ್ಷಿಣ ಭಾರತದ ವಾಗ್ಗೇಯಕಾರರು ಪ್ರಭಾವಿತರಾಗಿ ಅವರನ್ನು ತಮ್ಮ ರಚನೆಗಳಿಗಾಗಿ ಅನುಕರಿಸಿದರು.

**ಶ್ರೀಪಾದರಾಯರು, ಪುರಂದರದಾಸರು ಹಾಗೂ ವಾದಿರಾಜರ ಶುಕಸಾರಿಕಾ ಪ್ರಬಂಧಗಳು**

ಮತಂಗನು ಉಲ್ಲೇಖಿಸಿ, ನಂತರದ ಅನೇಕ ಶಾಸ್ತ್ರಜ್ಞರೂ ಉಲ್ಲೇಖಿಸಿದ ಶುಕಸಾರಿಕಾ ಪ್ರಬಂಧವೇ ಎಂದು ನಿಶ್ಚಯಿಸಬಹುದಾದ 'ಕಂಜನೇತ್ರೇ ಶುಭ ಮಂಜುಳ ಗಾತ್ರೇ' ಎಂಬ ಒಂದು ವಿಶೇಷವಾದ ಐತಿಹಾಸಿಕ ಮೌಲ್ಯವುಳ್ಳ ಪ್ರಬಂಧವು ಶ್ರೀಪಾದರಾಜರಿಂದ ಹದಿನೈದನೆಯ ಶತಮಾನದಲ್ಲಿ ರಚಿತವಾಯಿತು.ಇದು ನಾಟ್ಯರಂಗ ಹಾಗೂ ಜನಪದೀಯ ಗೀತಗಳನ್ನು ಅನುಸರಿಸಿ ಮಿಶ್ರವಾಗಿ ರಚಿಸಿರುವ ಪ್ರಬಂಧವೆಂದು ತೋರುತ್ತದೆ. ಶುಕಸಾರಿತವು ಸಂಭಾಷಣಾ ಗೀತವಾಗಿದ್ದು ರುಕ್ಮಿಣಿ ಹಾಗೂ ಸತ್ಯಭಾಮೆಯರ ನಡುವೆ ಶ್ರೀಕೃಷ್ಣನು ಯಾರನ್ನು ಹೆಚ್ಚು ಪ್ರೀತಿಸುತ್ತಾನೆ ಎಂಬ ವಿಷಯವಾಗಿ ಜಗಳದ ಚರ್ಚೆಯು ನಡೆಯುವ ಸಾಹಿತ್ಯವಿದೆ. ಇದಕ್ಕೆ ಪಲ್ಲವಿ ಇದ್ದು ದ್ವಿತೀಯ ಪ್ರಾಸವಿರುವ 17 ಚರಣಗಳು ಇವೆ. ಚರಣಾಂತ್ಯದಲ್ಲಿ ಶ್ರೀಕೃಷ್ಣನು ಇಬ್ಬರನ್ನೂ ಸಮಾಧಾನ ಪಡಿಸುವ ಸಾಹಿತ್ಯವಿದೆ. ಇದರ ಮೇಲ್ಪಂಕ್ತಿಯನ್ನೇ ಅನುಸರಿಸಿ ಪುರಂದರದಾಸರು ರಚಿಸಿರುವ 'ಚಂದ್ರಗಾವಿಯನುಟ್ಟು ದುಂಡು ಮುತ್ತನೆ ಕಟ್ಟಿ ಪೆಂಡೆಯರುಳಿಯನಿಟ್ಟ' ಎಂಬ ಪ್ರಬಂಧವು ಅರ್ಧದಷ್ಟು ಸಂಭಾಷಣಾ ಗೀತದಂತೆ ಕಂಡರೂ ನಂತರ ಗೋಪಿ ಹಾಗೂ ಸುಂಕವನ್ನು ಕೇಳುವ ರಂಗಯ್ಯನ ನಡುವಿನ ಸುಂದರ, ಹಾಗೂ ಚುರುಕಾದ ಮಾತಿನ ಚಕಮಕಿಗಳ ಸಂಭಾಷಣೆಯು ಶುಕಸಾರಿಕಾ ಪ್ರಬಂಧವನ್ನೇ ಹೋಲುತ್ತದೆ. ಇದೂ ದ್ವಿತೀಯ ಪ್ರಾಸವನ್ನು ಹೊಂದಿ ಬೇರೆ ಬೇರೆ ಪುಸ್ತಕಗಳಲ್ಲಿ ಬೇರೆ ಬೇರೆ ಸಂಖ್ಯೆಗಳ ಚರಣಗಳನ್ನು ಹೊಂದಿದೆ. ವಾದಿರಾಜರಿಂದ 'ಏ ರಂಗಧಾಮ ಏ ರಂಗಧಾಮ, ನಾರುವ ಮೈಯವನತ್ತ ಸಾರು' ಎಂಬ ಶುಕಸಾರಿತವು ರಚಿತವಾಗಿದೆ. ಈ ಪ್ರಬಂಧವು ಸತ್ಯಭಾಮೆ ಹಾಗೂ ರಂಗಧಾಮನಾದ ಕೃಷ್ಣನ ನಡುವೆಯ ಸಂಭಾಷಣೆಯಾಗಿದ್ದು ಸತ್ಯಭಾಮೆಯ ವಿಷ್ಣುವಿನ ದಶಾವತಾರಗಳ ರೂಪಗಳನ್ನು ಹೀಯಾಳಿಸಿದಾಗ ಕೃಷ್ಣನು ಸೂಕ್ತ ಸಮಜಾಯಿಷಿಗಳನ್ನು ನೀಡಿ ತನ್ನನ್ನು ಬೈಗಳಿಂದ ರಕ್ಷಿಸಿಕೊಳ್ಳುವುದಾಗಿದೆ. ಈ ಸಾಹಿತ್ಯವೂ ದ್ವಿತೀಯ ಪ್ರಾಸವನ್ನು ಹೊಂದಿದೆ ಹಾಗೂ 10 ಚರಣಗಳನ್ನು ಹೊಂದಿದೆ. ಈ ಮೂರೂ ಶುಕಸಾರಿಕಾ ಪ್ರಬಂಧಗಳೂ, ಈ ಪ್ರಬಂಧದ ಲಕ್ಷಣವು ಹೇಳುವಂತೆ ಎರಡು ತಾಳಗಳಲ್ಲಿ ಹಾಡಲು ಅನುಕೂಲವಾಗುವಂತೆ ಖಂಡ ಮತ್ತು ಚತುರಶ್ರಗತಿಗಳೆರಡರಲ್ಲೂ ಹಾಡಲು ಸೌಲಭ್ಯವಿದೆ ಹಾಗೂ ಜನಪದ ಗೀತೆಗಳಂತೆ ಸುಂದರವಾಗಿವೆ. ಶುಕಸಾರಿಕಾ ಪ್ರಬಂಧಕ್ಕೆ ಪ್ರತಿ ಚರಣಾಂತ್ಯದಲ್ಲಿಯೂ ಪಾಟಾಕ್ಷರಗಳ(ಸೊಲ್ಲುಕಟ್ಟು) ಜತಿಗಳನ್ನು ರಚಿಸಿ ಹಾಡಬೇಕು ಅಥವಾ ಮೃದಂಗದಂತಹ ಲಯವಾದ್ಯಗಳಲ್ಲಿ ಜತಿಗಳನ್ನು ನುಡಿಸಬೇಕು. ಒಂದು ಪಾತ್ರವು ಒಂದು ರಾಗ, ತಾಳ ಅಥವಾ ಗತಿಯಲ್ಲಿ ಹಾಡಿದರೆ, ಇನ್ನೊಂದು ಪಾತ್ರವು ಹಿಂದಿನ ರಾಗಕ್ಕೆ ಹೊಂದುವಂತಹ ಇನ್ನೊಂದು ಬೇರೆ ರಾಗದಲ್ಲಿ ಹಾಗೂ ಗತಿಯಲ್ಲಿ ಹಾಡಬೇಕು. ಪದ್ಮಶ್ರೀ ಮಹಾಮಹೋಪಾಧ್ಯಾಯ ಡಾ. ರಾ. ಸತ್ಯನಾರಾಯಣರವರು, ಬೆಂಗಳೂರಿನ ಆಕಾಶವಾಣಿಯಲ್ಲಿ ದಿನಾಂಕ 18 ಮೇ, 1981 ರಲ್ಲಿ "ಬೇರು – ಮೇರು" ಎಂಬ ತಮ್ಮ ಸಂಗೀತರೂಪಕ ಕಾರ್ಯಕ್ರಮದಲ್ಲಿ ಶ್ರೀಪಾದರಾಯರ ಮೇಲಿನ ಶುಕಸಾರಿಕಾ ಪ್ರಬಂಧವನ್ನೂ ಹಾಗೆಯೇ ಜೋಗುಳಗೀತೆಯನ್ನು ಪ್ರಾಚೀನ ಶಾಸ್ತ್ರಕಾರರು ಉಲ್ಲೇಖಿಸಿದಂತೆಯೇ ಪುನರ್ರಚಿಸಿ ಕಲಾವಿದರಿಂದ ಹಾಡಿಸಿದ್ದಾರೆ. ದಾಸವರೇಣ್ಯರ ಶುಕಸಾರಿಕಾ ಪ್ರಬಂಧಗಳು ನೃತ್ಯನಾಟಕಗಳಿಂದ ಪ್ರಭಾವಿತಗೊಂಡು, ಅಭಿನಯಕ್ಕಾಗಿಯೇ ರಚಿತಗೊಂಡಿರಬಹುದಾದ ಸಾಧ್ಯತೆಗಳೂ ಇವೆ. ಶುಕಸಾರಿತವು ಯುಗಳ ಗಾಯನಕ್ಕೂ, ಯುಗಳ ನೃತ್ಯಕ್ಕೂ ಅಳವಡಿಸಿದರೆ ಸುಂದರ ಪ್ರಸ್ತುತಿಯಾಗಬಹುದು. ಪ್ರಸ್ತುತ ಲೇಖಕಿಗೆ ಲಾಟ ಭಾಷೆಯ ಅಥವಾ ಮಿಶ್ರಭಾಷೆಗಳ ಶುಕಸಾರಿಕಾ ಪ್ರಬಂಧವು ದೊರಕಿಲ್ಲ. ಯಾರಾದರೂ ವಿದ್ವಾಂಸರಿಗೆ ದೊರಕಿದರೆ ಶುಕಸಾರಿಕಾ ಪ್ರಬಂಧಗಳ ಸಂಕಲನವನ್ನು ಮಾಡಬಹುದು. ಹುಡುಕಿದಲ್ಲಿ ದಾಸವರೇಣ್ಯರದೇ ಇನ್ನೂ ಕೆಲವು ಶುಕಸಾರಿಕಾ ಪ್ರಬಂಧಗಳು ದೊರೆಯಬಹುದು. ವಿದ್ವನ್ಮಣಿಗಳು ಹೊಸ ಶುಕಸಾರಿಕಾ ಪ್ರಬಂಧಗಳನ್ನು ರಚಿಸಿ, ಗಾಯಕರು ಹಾಡಿ, ನರ್ತಕರು ನರ್ತಿಸಿ, 1300 ವರ್ಷಗಳ ಇತಿಹಾಸವಿರುವ ಈ ಪ್ರಬಂಧವನ್ನು ಜೀವಂತವಾಗಿಡಬಹುದು.

**ಸಂಪ್ರದಾಯ ಗೀತೆಗಳಲ್ಲಿ ಶುಕಸಾರಿಕಾ**

ಸಂಪ್ರದಾಯ ಗೀತೆಗಳ ರಚನೆಗಳಲ್ಲಿಯೂ, ಅವುಗಳ ಪ್ರಸ್ತುತಿಯಲ್ಲಿಯೂ ಸ್ತ್ರೀಯರೇ ಅಗ್ರಗಣ್ಯರು. ಚತುರ್ವರ್ಣಗಳಲ್ಲೂ, ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥವೆಂಬ ಮೂರು ಆಶ್ರಮಗಳಲ್ಲಿಯೂ ಸ್ತ್ರೀಯು ಸಮಾಜಕ್ಕೆ ಅನಿವಾರ್ಯ, ಪೋಷಕ ಹಾಗೂ ಆಧಾರಸ್ತಂಭ. ಆಧ್ಯಾತ್ಮಿಕ, ಧಾರ್ಮಿಕ, ಸಂಪ್ರದಾಯಗಳ ಆಚರಣೆಗಳಲ್ಲಿ ಅವರದೇ ಮುಖ್ಯ ಪಾತ್ರ, ಹಾಗೂ ಪಾಲು. ಭಾರತದ ವಿವಿಧ ಪ್ರಾಂತ್ಯಗಳಲ್ಲಿ, ವಿವಿಧ ಜಾತಿ ಮತಗಳಲ್ಲಿ ಸಂಸ್ಕಾರ ವಿಧಿಗಳಿಗೆ ಸಂಬಂಧಿಸಿದ ಹಾಡುಗಳನ್ನು ಅಲ್ಲಿಯ ಮಹಿಳೆಯರೇ ರಚಿಸಿ ಹಾಡಿಕೊಳ್ಳುವ ಪದ್ಧತಿ ಬಹುಪುರಾತನ. ಈ ಹಾಡುಗಳಲ್ಲಿ ನಮ್ಮ ಸಾಂಸ್ಕೃತಿಕ ಹಾಗೂ ಧಾರ್ಮಿಕ ಪರಂಪರೆಯಗಳ ಮೌಲ್ಯವೂ ಅಡಕವಾಗಿರುವುದರೊಂದಿಗೆ ಧರ್ಮಾನುಷ್ಠಾನಕ್ಕೆ ಮಾದರಿಗಳೂ ಆಗಿರುತ್ತದೆ. ಇವು ಸಮಾಜದ ಎಲ್ಲ ಸ್ತರಗಳ, ವರ್ಗಗಳ ಜನರಿಗೂ ಸಂಸ್ಕಾರವಿಧಿಗಳಲ್ಲಿ ಉಪಯೋಗಿಸಿಕೊಳ್ಳುವಂತಿರುತ್ತಿತ್ತು.

ಪೂಜೆಗಳು, ಉಪನಯನ, ವಿವಾಹ, ನಾಮಕರಣ, ಅನ್ನಪ್ರಾಶನ, ಚೌಲ, ಜೋಗುಳ, ಹಬ್ಬಗಳು, ವ್ರತಗಳು, ಆರತಿ ಇತ್ಯಾದಿ ಅನೇಕ ಸಂದರ್ಭಗಳ ಶಾಸ್ತ್ರಗಳ ಹಾಡು ಎರಡು ಮೂರು ನಿಮಿಷಗಳಲ್ಲಿ ಮುಗಿದುಹೋಗುವಂತಹುದಾದರೂ ಅನೇಕ

ಕಥನಗಳ ದೀರ್ಘವಾದ ರಚನೆಗಳನ್ನು ಆಶುವಾಗಿಯೇ ರಚಿಸುವ, ಅವುಗಳನ್ನು ಕಂಠಪರಂಪರೆಯಲ್ಲೇ ನೆನಪಿನಲ್ಲಿಟ್ಟುಕೊಂಡು ಯಾವಾಗೆಂದರೆ ಆಗ ತತ್‌ಕ್ಷಣದಲ್ಲಿ ಹಾಡುತ್ತಿದ್ದ ಅನಕ್ಷರಸ್ಥ ಸ್ತ್ರೀಯರೂ ಇದ್ದರು. ಇದರಲ್ಲಿ ಹೆಳವನಕಟ್ಟೆ ಗಿರಿಯಮ್ಮ, ಹರಪನಹಳ್ಳಿ ಭೀಮವ್ವನಂತಹವರು ಎಷ್ಟು ಮಂದಿಯೋ! ಕಥಾಸ್ವರೂಪದ ದೀರ್ಘ ಸಂಪ್ರದಾಯ ಗೀತೆಗಳಲ್ಲಿಯೂ ಶುಕಸಾರಿಕಾ ಪ್ರಬಂಧಗಳಿದ್ದು, ವೇದವ್ಯಾಸ – ಧರ್ಮರಾಯ, ಧರ್ಮರಾಯ – ಕೃಷ್ಣ, ಕೃಷ್ಣ – ಭೀಮ, ಅರ್ಜುನ – ಚಂಡಿ, ಅರ್ಜುನ – ಪ್ರಮೀಳ, ಅರ್ಜುನ – ಬಬ್ರುವಾಹನ ಮುಂತಾದವರಲ್ಲಿ ನಡೆಯುವ ಸಂಭಾಷಣೆಗಳ ಶುಕಸಾರಿಕಾ ಸಂವಾದಗೀತೆಗಳಿವೆ. ಇವುಗಳನ್ನು ಬೇರೆ ಬೇರೆ ಹಾಡುವ ವ್ಯಕ್ತಿಗಳು, ಎದುರು ಬದುರಾಗಿ ಒಬ್ಬೊಬ್ಬರು ಅಥವಾ ತಂಡಗಳು ಹಾಡಿನ ಸಂವಾದವನ್ನು ನಡೆಸಬಹುದು. ಇಡೀ ಪ್ರಬಂಧವನ್ನು ಪ್ರಸ್ತುತ ಪಡಿಸಲು ಆರೇಳು ಗಂಟೆಗಳೋ ಅಥವಾ ದಿನಕ್ಕೊಂದು ಅಧ್ಯಾಯದಂತೆ ಹಾಡಿದರೆ ಏಳು ದಿನಗಳೋ ಬೇಕಾಗುತ್ತದೆ. ಇಂತಹ ಕೆಲವು ಶುಕಸಾರಿಕಾ ಸಂಪ್ರದಾಯದ ಹಾಡುಗಳನ್ನು ವಾಗೀಶ್ವರೀ ಶಾಸ್ತ್ರಿಯವರು ತಮ್ಮ 'ಹೃದಯಸಂಪುಟ' ಪುಸ್ತಕದಲ್ಲಿ ಸಂಗ್ರಹ ಮಾಡಿದ್ದಾರೆ.

**'ಸಂಭಾಷಣಾ ಗೀತಗಳೆಲ್ಲ ಶುಕಸಾರಿತವೇ?'**

ಕೊರವಂಜಿ ನೃತ್ಯ–ನಾಟಕ ಪ್ರಬಂಧಗಳಲ್ಲಿ ಸಂಭಾಷಣಾ ಗೀತಗಳು ಇದ್ದರೂ, ಅನೇಕ ಸಂಭಾಷಣಾ ದರುಗಳು ಇದ್ದರೂ ಅವೆಲ್ಲವೂ ಶುಕಸಾರಿಕಾ ಪ್ರಬಂಧಗಳು ಆಗುವುದಿಲ್ಲ. ಶುಕಸಾರಿಕಾ ಪ್ರಬಂಧವಾಗಲು ಗೀತಸಾಹಿತ್ಯವು ಮಾತಿನ ಚಕಮಕಿಯನ್ನು ಹೊಂದಿರಲೇ ಬೇಕಾಗುತ್ತದೆ. ಶುಕಸಾರಿಕಾ ಪಕ್ಷಿಗಳ ಜಗಳಗಂಟತನದ, ಜೋಡಿತನ ಹಾಗೂ ಚುರುಕಿನ ಸ್ವಭಾವವನ್ನೇ ಅನುಕರಿಸಿ ಈ ಪ್ರಬಂಧಕ್ಕೆ ಈ ಹೆಸರನ್ನು ಇಡಲಾಗಿದೆ ಎಂದು ಮೊದಲೇ ಉಲ್ಲೇಖಿಸಲಾಗಿದೆ. ಮಾತ್ರವಲ್ಲದೆ, ಈ ರಚನೆಗಳು ಎರಡು ರಾಗಗಳಲ್ಲಿಯೂ ಎರಡು ತಾಳಗಳಲ್ಲಿಯೂ ಪ್ರಶ್ನೋತ್ತರಗಳಂತೆ ಹಾಡಲು ಸಾಧ್ಯವಾಗುವಂತೆ ರಚಿತವಾಗಿರಬೇಕು. ಕನ್ನಡ, ಲಾಟ ಹಾಗೂ ಮಿಶ್ರಭಾಷೆಯಲ್ಲಿ ರಚಿತವಾಗಿರಬೇಕು. ಉತ್ತರ ಭಾರತದಲ್ಲಿ ಹಾಡುವ ಕವ್ವಾಲಿಯು 700 ವರ್ಷಗಳು ಹಳೆಯದೆಂದೂ ಇದು ಭಾರತೀಯ, ಸೂಫಿ ಹಾಗೂ ಪರ್ಶಿಯಾ ಸಂಗೀತಗಳಿಂದ ಪ್ರಭಾವಿತವಾದದ್ದು ಎಂದು ವಿದ್ವಾಂಸರು ಹೇಳಿದ್ದಾರೆ. ಆಶುಮಾತುವಿನ ಚಕಮಕಿಗಳಿಂದ ರಂಜನೆಯನ್ನೀಯುವ, ಸಂಭಾಷಣೆಯಂತಿರುವ ಈ ರಚನೆಯು ಈಗ ಹೆಚ್ಚು ಆಧ್ಯಾತ್ಮವನ್ನೂ ಹೇಳುವುದಾದರೂ, ಉದ್ರೇಕಕ್ಕೂ ಎಡೆಕೊಡುವಂತಿದ್ದ ಹಿಂದಿನ ಕವ್ವಾಲಿಯು ಹಿಂದೆ ಶುಕಸಾರಿಕಾ ಪ್ರಬಂಧದಿಂದಲೇ ಪ್ರಭಾವಗೊಂಡಿರುವ ಸಾಧ್ಯತೆ ಇದೆ. ಇತ್ತೀಚಿನ ಕಾಲದಲ್ಲಿ ಅದು ಆಧ್ಯಾತ್ಮಿಕ ವಿಷಯಗಳನ್ನು ಹೆಚ್ಚು ಆಧರಿಸಿರಬಹುದು. ಕರ್ನಾಟಕದವನೇ ಆಗಿದ್ದ ಪಂಡರೀಕ ವಿಠ್ಠಲನು ತನ್ನ ನರ್ತನನಿರ್ಣಯದ ಮೂರನೆಯ ಗಾಯಕ ಪ್ರಕರಣದಲ್ಲಿ ಅನೇಕ ಕನ್ನಡ ಪ್ರಬಂಧಗಳನ್ನೂ, ದಶಾವತಾರವನ್ನೂ ಹೇಳುವಲ್ಲಿ, ಆ ಕಾಲದಲ್ಲಿ ದಾಸವರೇಣ್ಯರಾಗಿದ್ದ, ಪ್ರಸಿದ್ಧರೂ ಆಗಿದ್ದ ಶ್ರೀಪಾದರಾಯರಾದಿ ದಾಸವರೇಣ್ಯರಿಂದ ರಚಿತವಾಗಿದ್ದ, ಜನಸಾಮಾನ್ಯರಿಗೆ ಬಹಳ ಇಷ್ಟವಾಗಿದ್ದಿರಬಹುದಾದ ದೇಶೀ ಪ್ರಬಂಧವಾದ ಶುಕಸಾರಿಕಾ ಪ್ರಬಂಧವನ್ನು ಹೇಳದಿದ್ದುದು ಆಶ್ಚರ್ಯವೆನಿಸುತ್ತದೆ.

ಶ್ರೀ ವಾದಿರಾಜ ವಿರಚಿತ ಇನ್ನೆರಡು ರಚನೆಗಳು ಕುತೂಹಲವನ್ನು ಮೂಡಿಸುತ್ತದೆ. 'ಗೋಪ ಗೋಪನೆಂಬಾ ಕೋಗಿಲೆ – ಪಾಂಡುರಂಗ ಮಂಗಳ ಮೂರುತಿಪ್ಪ ಶೃಂಗಾರವಾದ– ಬರಹೇಳು ಕೋಗಿಲೆ' ಎಂಬ ಕೋಕಿಲ ಭಾಷಿಣಿ' ಹಾಗೂ 'ಗಿಣಿಯೇ ನಿನಗೇನು ಬೇಕದ ನೀನೆನಿಪ ಹರಿಯನು ಕರೆತಾರೇ' ಎಂಬುದೊಂದು ಶುಕಭಾಷಿಣಿ ರಚನೆಯೂ ಇದೆ. ವಾದಿರಾಜರ ಈ ರಚನೆಗಳಿಗೆ ಮದನಿಕೆಯರ ಶಿಲ್ಪಗಳು ಸ್ಫೂರ್ತಿಯಾಗಿದ್ದಿರಲೂ ಬಹುದು. ಇವುಗಳೂ ನೃತ್ಯ ವಿದ್ವಾಂಸರಿಗೆ ಉಪಯೋಗಿಯಾಗಿರುವಂತಹ ರಚನೆಗಳೇ. ಅನೇಕ ಇಂತಹ ಕರ್ನಾಟಕದ್ದೇ ಆದ ಅತ್ಯಂತ ಪ್ರಾಚೀನ ಪ್ರಬಂಧಗಳತ್ತ ಗಾಯಕ ಹಾಗೂ ನರ್ತಕ ವಿದ್ವಾಂಸರು ಗಮನ ಹರಿಸುವರೆಂದೂ, ಕರ್ನಾಟಕದ್ದೇ ಆದ ಸಂಗೀತ (ಗೀತ, ವಾದ್ಯ, ನರ್ತನ) ಗಳನ್ನು ಪುನರುದ್ಧರಿಸುವರೆಂದೂ ಆಶಿಸೋಣವೇ?

(ಆಕರ ಋಣ —ಪದ್ಮಶ್ರೀ, ಮಹಾಮಹೋಪಾಧ್ಯಾಯ ಡಾ. ರಾ. ಸತ್ಯನಾರಾಯಣರವರ "ಬೃಹದ್ದೇಶೀ"ವಿಮರ್ಶಾತ್ಮಕ ಗ್ರಂಥ, Music of Madhva Monks of Karnataka, ªÀÄvÀÄÛ Haridasas and Karnataka Music ಲೇಖನ, 'ಧಾರ್ಮಿಕ ಸಂಸ್ಕಾರಗಳಲ್ಲಿ ಸಂಗೀತ 'ಪುಸ್ತಕ.

https://sa.m.wikisource.org/wiki/%E0%A4%AA%E0%A5%83%E0%A4%B7%E0%A5%8D%E0%A4%A0%E0%A4%AE%E0%A5%8D:%E0%A4%AD%E0%A4%B0%E0%A4%A4%E0%A4%95%E0%A5%8B%E0%A4%B6%E0%A4%83-%E0%A5%A8.pdf/%E0%A5%A9%E0%A5%AA%E0%A5%AA - - ಈ ಲಿಂಕ್ ನಲ್ಲಿ 'ಭರತಕೋಶದಲ್ಲಿರುವ 'ಶುಕಸಾರಿಕಾ' ಪ್ರಬಂಧ ಲಕ್ಷಣ ಮತ್ತು ಶಾಸ್ತ್ರಜ್ಞರ ಉಲ್ಲೇಖಗಳಿವೆ.)

---------------------------------